ಪಿಡಬ್ಲೂ-1 ಓ.ಎಸ್.ನಂ.438/2023

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.06.01.2025**

**ವಾಟಿ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಕೆ ಆರ್ ಎಮ್ ವಕೀಲರಿಂದಃ**

1. ಪ್ರತಿವಾದಿಗಳು ದಾವಾ ಆಸ್ತಿಯನ್ನು ಒತ್ತುವರಿ ಮಾಡಿಕೊಳ್ಳಲು ಬಂದಾಗ ಈ ದಾವೆಯನ್ನು ಸಲ್ಲಿಸಿದ್ದೇನೆ. ಈ ಬಗ್ಗೆ ಪೋಲಿಸರಿಗೆ ದೂರು ನೀಡಲು ಹೋದಾಗ ಪೋಲಿಸರು ದೂರನ್ನು ಸ್ವೀಕರಿಸಿರುವುದಿಲ್ಲ, ನ್ಯಾಯಾಲಯಕ್ಕೆ ಹೋಗುವಂತೆ ತಿಳಿಸಿರುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ- ರಸ್ತೆ, ಅಂಜಿನಜಪ್ಪ ಮತ್ತು ಪ್ರಭಾಕರ್ ರವರ ಆಸ್ತಿ, ಪಶ್ಚಿಮಕ್ಕೆ-ಕೇಶವ ರವರ ಆಸ್ತಿ, ಉತ್ತರಕ್ಕೆ-ಗೋವಿಂದಪ್ಪ ಮತ್ತು ಜಾನಕಮ್ಮ ರವರ ಆಸ್ತಿ, ದಕ್ಷಿಣಕ್ಕೆ-ನಾರಾಯಣಸ್ವಾಮಿ ರವರ ಆಸ್ತಿ ಇರುತ್ತದೆ. ಹದ್ದುಬಸ್ತು ಕಲ್ಲು ಕಾಣುವಂತೆ ಪೋಟೋಗಳನ್ನು ತಗೆದು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ರೀತಿ ಯಾವುದೇ ಪೋಟೋ ಹಾಜರು ಪಡಿಸದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ದ್ರಾಕ್ಷಿ ಗಿಡ ಹಾಕಿರುತ್ತೇವೆ, ಆದರೆ ಯಾವುದೇ ಕಾಂಪೌಂಡ್ ನಿರ್ಮಾಣ ಮಾಡಿರುವುದಿಲ್ಲ, ಕಲ್ಲು ಕುಚ್ಚಗಳನ್ನು ಮಾತ್ರ ಹಾಕಿರುತ್ತೇವೆ. ನನ್ನ ಗಂಡ ಗ್ರಾಮ ಪಂಚಾಯಿತಿಯ ಸದಸ್ಯರು ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವುದೇ ಅತಿಕ್ರಮ ಪ್ರವೇಶ ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ವಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**